





ತಡೆಯಲಾರದೆ ಕಣ್ಣುಮುಚ್ಚಿ ಕುಳಿತುಬಿಟ್ಟೆ. ಕಾರು ನಿಂತಿತು, ದಾರಿಯಲ್ಲಿ ಊಟಕ್ಕೆ ಅಂದುಕೊಂಡು ಕಣ್ಣುಬಿಟ್ಟೆ. ಕಾರು ಬೆಂಗಳೂರಿನ ಸುಬೇದಾರ್‌ಛತ್ರದ ರಸ್ತೆಯಲ್ಲಿದ್ದ 'ವೋಲ್ಗಾ ಹೋಟೆಲ್' ಮುಂದೆ ನಿಂತಿತ್ತು. 'ಇಳಿ ಊಟ ಮಾಡೋಣ' ಅಂದ್ರು. ಅಲ್ಲಿ ಊಟ ಮುಗಿಸಿದ ನಂತರ 'ಮೋತಿ ಮಹಲ್'ಗೆ ಬಂದ್ವಿ. ನಾನು ನಿಧಾನವಾಗಿ 'ಅಲ್ಲ, ಅಷ್ಟು ಜೋರಾಗಾ ಓಡಿಸೋದು' ಅಂದೆ. 'ನೀನು ಊಟ ಮಾಡಬೇಕು ಅಂದ್ಯಲ್ಲಪ್ಪಾ, ಹೋಟ್ಲು ಮುಚ್ಕೋಕೆ ಮುಂಚೆ ಬರಬೇಕಲ್ಲ ಅದಕ್ಕೆ ಸ್ವಲ್ಪ ಸ್ಪೀಡಾಗಿ ಬಂದೆ' ಅಂದ್ರು. ನಾನು ಮತ್ತೆ ಮಾತಾಡಲಿಲ್ಲ. ನಂತರ ಹತ್ತಾರು ಬಾರಿ ಅವರ ಜೊತೆಯಲ್ಲಿ ಕಾರಿನಲ್ಲಿ ಹೋಗುವ ಸನ್ನಿವೇಶಗಳು ಬಂದರೂ ನಾನು ಮತ್ತೆ ಆ ಸಾಹಸ ಮಾಡಲಿಲ್ಲ.

'ರಂಗನಾಯಕಿ' ಚಿತ್ರದಲ್ಲಿ ರಾತ್ರಿ ನಾಟಕದ ಕಂಪನಿಯ ಮೇಲೆ ನಾಟಕ ನಡೆಯುವಾಗ ಪುಂಡರು ಲಗ್ಗೆ ಹಾಕುವ ದೃಶ್ಯವೊಂದಿದೆ. ಆಗ ಅಂಬರೀಷ್ ಇತರರು ಅವರನ್ನು ಹೊಡೆದೋಡಿಸುವ ಚಿಕ್ಕ ಫೈಟ್ ಸೀನೊಂದಿದೆ. ಅದನ್ನು ನೈಟ್ ಎಫೆಕ್ಟ್‌ನಲ್ಲೇ ಶೂಟ್ ಮಾಡಬೇಕಿದ್ದು, ಸಾಯಂಕಾಲ ಆರು ಗಂಟೆಯ ನಂತರ ಆ ದೃಶ್ಯದ ಶೂಟಿಂಗ್ ಮಾಡಬೇಕಿತ್ತು. ಪುಟ್ಟಣ್ಣನವರು ಹೊಸಬರು ಬೇಡ ಅಂದರೂ ಕೇಳದೇ ಹಾಸನ ರಘು ಆವರನ್ನು ಫೈಟ್ ಮಾಸ್ಟರ್ ಆಗಿ ನೇಮಿಸಿಕೊಂಡೆವು. ರಘು ಅವರಿಗೆ ಅದು ಮೊದಲನೇ ಚಿತ್ರ. ಸಾಯಂಕಾಲ ಆರು ಗಂಟೆಯವರೆಗೂ ದೃಶ್ಯಗಳನ್ನು ಚಿತ್ರೀಕರಿಸಿ, ಪುಟ್ಟಣ್ಣನವರು ಛಾಯಾಗ್ರಾಹಕರಾದ ಮಾರುತಿರಾಯರನ್ನೂ ನನ್ನನ್ನೂ ಕರೆದು 'ರಾತ್ರಿ ಫೈಟ್ ಸೀನ್‌ಗಳನ್ನು ನೀವು ಚಿತ್ರೀಕರಿಸಿ' ಎಂದು ಹೊರಟುಹೋದರು. ನಾವು ಕ್ಯಾಮೆರಾ ಲೈಟಿಂಗ್ ಸಿದ್ಧಪಡಿಸಿಕೊಂಡು ರಿಹರ್ಸಲ್ ಮಾಡಿ ಟೇಕ್ ಮಾಡಲು ಸಿದ್ಧವಾದಾಗ ಅಂಬರೀಷ್ ಅವರು 'ಇವತ್ತೇ ಮನೆಗೆ ಹೋಗಬೇಕು ಅಂತಿದಿಯಾ, ಡೈರೆಕ್ಟರಿಗೆ ಗೊತ್ತಾದರೆ ನೀನು ಈಗಲೇ ಪ್ಯಾಕಪ್' ಅಂದರು. ಸಾಮಾನ್ಯವಾಗಿ ಪುಟ್ಟಣ್ಣನವರು ಬೇರೆಯವರಿಗೆ ಶೂಟಿಂಗ್ ಮಾಡಲು ವಹಿಸುತ್ತಿರಲಿಲ್ಲ. ಅದು ಅಂಬರೀಷ್ ಅವರಿಗೂ ಚೆನ್ನಾಗಿ ಗೊತ್ತಿದ್ದುದರಿಂದ ನಾನು ತಮಾಷೆಗೆ ಶೂಟ್ ಮಾಡುತ್ತಿದ್ದೇನೆಂದು ಭಾವಿಸಿ ಹಾಗೆ ಅಂದಿದ್ದರು. ನಂತರ ಛಾಯಾಗ್ರಾಹಕ ಮಾರುತಿರಾವ್ ಅವರು ವಿಷಯ ತಿಳಿಸಿದ ನಂತರ ಒಪ್ಪಿ ಮುಂದಾದರು. ಅಂದಿನಿಂದ ನಾಲ್ಕು ದಿನಗಳ ಕಾಲ ಪ್ರತಿ ಸಾಯಂಕಾಲ ಫೈಟ್ ಮುಗಿಯುವವರೆಗೂ ರಘು ಹೊಸಬರಾದ್ದರಿಂದ ಹಲವಾರು ಫೈಟ್ ಬ್ಲಾಕ್‌ಗಳನ್ನು ಕಂಪೋಸ್ ಮಾಡಲು ಅಂಬರೀಷ್ ಅವರೇ ಸಹಕರಿಸಿದ್ದರು.

## ಬಣ್ಣ... ಒಲವಿನ ಬಣ್ಣ...

ಇನ್ನು ಅವರ ಹುಡುಗಾಟದ ಸ್ವಭಾವ ಎಲ್ಲರಿಗೂ ಗೊತ್ತಿರುವಂತಹದ್ದೇ. ಶೂಟಿಂಗ್ ಸಮಯದಲ್ಲಿ ನೀರಿದ್ದರೆ ಇಡೀ ತಂಡವನ್ನು ನೀರಿನಲ್ಲಿ ನೆನೆಸದೇ ಅವರು ಬಿಡುತ್ತಿರಲಿಲ್ಲ. ಓಕುಳಿ ಸನ್ನಿವೇಶವೋ ಬಣ್ಣಗಳೊಂದಿಗಿನ ಸನ್ನಿವೇಶದ ಚಿತ್ರೀಕರಣವೋ ಇದ್ದರೆ ಮುಗಿಯಿತು, ಎಲ್ಲರೂ ಬಣ್ಣದಲ್ಲಿ ಮುಳುಗೇಳಬೇಕಾದ್ದೇ. ಕಂಠೀರವ ಸ್ಟುಡಿಯೋದಲ್ಲಿ ಜೋಸೈಮನ್ ಅವರ 'ರೌಡಿ ರಾಜ' ಚಿತ್ರದ ಶೂಟಿಂಗ್ ನಡೆಯುತ್ತಿತ್ತು. ಅವರನ್ನು ನೋಡಲು ಹೋಗಿದ್ದೆ. ಎರಡು ಯೂನಿಟ್ ಇಟ್ಟುಕೊಂಡು ಶೂಟ್ ಮಾಡುತ್ತಿದ್ದರು, ಒಂದು ಕಡೆ ಹಾಡು ಮತ್ತೊಂದು ಕಡೆ ಸೀನ್‌ಗಳು. 'ನಾನು ಸೀನ್‌ಗಳನ್ನ ಶೂಟ್ ಮಾಡೋ ಕಡೆ ಇರ್ತೀನಿ. ಹಾಡಿನ ಶೂಟಿಂಗ್‌ನಲ್ಲಿ ಅಂಬರೀಷ್ ಇದ್ದಾರೆ, ನೀನು ಬಿಡುವಾಗಿದ್ದರೆ ಡ್ಯಾನ್ಸ್ ಮಾಸ್ಟರ್ ಮದ್ರಾಸ್‌ನಿಂದ ಬರ್ತಾರೆ, ಅವರ ಜೊತೆ ಇದ್ದು ಸಾಂಗ್ ಶೂಟ್ ಮಾಡ್ತೀಯ' ಅಂದ್ರು. ಸರಿ ಅಂದೆ. ಹಾಡಿನ ಬಗ್ಗೆ ಅವರು ಎಲ್ಲ ವಿವರಗಳನ್ನ ಹೇಳಿ, ಆ ವೇಳೆಗೆ ಅಲ್ಲಿಗೆ ಬಂದ ಡ್ಯಾನ್ಸ್ ಮಾಸ್ಟರನ್ನ ಪರಿಚಯಿಸಿ ಹೊರಟುಹೋದರು.

ಅಂಬರೀಷ್ ಬಂದ ನಂತರ ಅವರ ಹತ್ತಿರ ಹೋಗಿ ಮಾತಾಡಿಸಿದೆ. 'ಏನು ವಿಶ್ವ ಇಲ್ಲಿ' ಅಂದ್ರು. ತಿಂಡಿ ತಿನ್ನುತ್ತಾ 'ಕೂತ್ಕೋ ತಿಂಡಿ ತಿನ್ನು, ಲೇ ಇನ್ನೊಂದು ಪ್ಲೇಟ್‌ನಲ್ಲಿ ತಿಂಡಿ ತಗೊಂಬಾರೋ' ಎಂದು ಹುಡುಗನಿಗೆ ಹೇಳುತ್ತಿದ್ದಾಗ, 'ನನ್ನ ತಿಂಡಿ ಆಯ್ತು. ಈಗ ಊಟದ ಸಮಯದಲ್ಲಿ ತಿಂದ್ರೆ ಮತ್ತೆ ಊಟ ಮಾಡೋಕಾಗಲ್ಲ' ಅಂದೆ. 'ಲೋ ಹಂಗಸ್ತೀಯಾ? ಮುಚ್ಕೊಂಡು ತಿನ್ನು. ತಿನ್ನದೇ ನೀನು ಇಲ್ಲಿಂದ ಹೋಗಿಬಿಡ್ತೀಯಾ?' ಅಂದ್ರು. 'ಹೋಗಲ್ಲ, ಹಾಡಿನ ಶುಟಿಂಗ್‌ಗೆ ನಾನೇ ಇರ್ತೀನಿ' ಅಂತ ಜೋಸೈಮನ್ ಅವರು ಹೇಳಿದ್ದನ್ನ ಹೇಳಿದೆ. 'ಸರಿ, ಕಾಸ್ಟ್ಯೂಮ್ ಹೇಳಿದೆಯಾ?' ಅಂದರು. 'ಈಗ ಕಳಿಸ್ತೀನಿ' ಅಂದವನೇ ಕಾಸ್ಟ್ಯೂಮ್ ರೂಂಗೆ ಹೋಗಿ ಅವರ ಡ್ರೆಸ್ ತೆಗೆಸುವಾಗ, ಕ್ಯಾಮೆರಾಮ್ಯಾನ್ ಕುಲಶೇಖರ್ ಶರಟು ಬದಲಾಯಿಸುತ್ತಿದ್ದರು. 'ಯಾಕೆ ಚೇಂಜ್ ಮಾಡ್ತಿದ್ದೀರಾ?' ಅಂದೆ. 'ಓಕಳಿ ಸಾಂಗ್ ಅಲ್ಲವಾ ಹೀರೋ ಬಣ್ಣ ಹಾಕಿಬಿಡ್ತಾರೆ' ಅಂದ್ರು. ನಾನು ಆ ಕಾಲಕ್ಕೆ ದುಬಾರಿ ಅನ್ನಿಸಿದ್ದ ಹೊಸ ಶರ್ಟ್ ಹಾಕಿಕೊಂಡು ಹೋಗಿದ್ದೆ. ನಾನೂ ಬುದ್ಧಿ ಉಪಯೋಗಿಸಿ ಕಾಸ್ಟ್ಯೂಮರ್‌ಗೆ ಹೇಳಿ ಅಲ್ಲಿದ್ದ ಒಂದು ಟೀ ಶರ್ಟ್ ಹಾಕಿಕೊಂಡು ಫ್ಲೋರೊಳಗೆ ಹೋದೆ.

ಶೂಟಿಂಗ್ ಶುರುವಾಯ್ತು. ಕಲಾವಿದರೂ ಡ್ಯಾನ್ಸರ್‌ಗಳು ಮಾತ್ರವಲ್ಲದೇ ಇಡೀ ತಂಡ ಬಣ್ಣದಲ್ಲಿ ಮುಳುಗಿಹೋಗಿತ್ತು. ಸಾಯಂಕಾಲ ಪ್ಯಾಕಪ್ ಆದ ನಂತರ ಅಂಬರೀಷ್ ನನ್ನನ್ನ ಕರೆದು ಮಾತಾಡ್ತಾ, ಕುರ್ಚಿಯಲ್ಲಿ ಕೂತು ಮೇಕಪ್‌ಮ್ಯಾನ್ ಶ್ರೀನಿವಾಸ್ ಅವರಿಂದ ಮೇಕಪ್ ತೆಗೆಸಿಕೊಳ್ತಾ ಇದ್ದರು. ಶ್ರೀನಿವಾಸ್ ಅವರು ನನ್ನ ಮುಂದೆ ಅವಶ್ಯಕತೆಗಿಂತ ಜಾಸ್ತೀನೇ ನಿಂತು ಮಾತಾಡೋರು. ಯಾಕೇಂತ ನನಗೂ ಗೊತ್ತಾಗಲಿಲ್ಲ. ಆಗ ಅಂಬರೀಷ್ ಅವರು 'ಮಗನೇ ನೀನು ಭಲೇ ಬುದ್ಧಿವಂತ! ಎಲ್ಲರು ಬಣ್ಣದಲ್ಲಿ ಮುಳುಗಿದರು. ನೀನು ಮಾತ್ರ ಕಾಸ್ಟ್ಯೂಮ್ ಟೀ ಶರ್ಟ್ ಹಾಕ್ಕೊಂಡು ಬಚಾವಾಗಿಬಿಟ್ಟೆ ಅಲ್ಲಾ'